ಶ್ರೀ ಜೆ. ಎಲ್. ಕಬಾಡೆ.—(ಉ) ಪ್ರಶ್ನೆಗೆ ಉತ್ತರವಾಗಿ ರಾಜ್ಯ ಸರ್ಕಾರದವರು ವಿಷಯವನ್ನು ಪರಿಶೀಲಿಸಿದ್ದಾರೆಂದೂ ಮತ್ತು ಆ ಬಗ್ಗೆ ವರದಿನ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಕಂಡುಬಂದಿಲ್ಲ ವೆಂದು ಹೇಳಿದ್ದೀರಿ. ರಾಜ್ಯದ ಪಬ್ಲಿಕ್ ಪ್ರಾಸಿಕ್ಯೂಟರ್‌ರವರು ಸದರಿ ಅಧಿಕಾರಿಗಳ ಬಗ್ಗೆ ಕೊಟ್ಟ ಅಭಿಪ್ರಾಯ ಏನು ?

† ಶ್ರೀ ಡಿ. ದೇವರಾಜ ಅರಸ್.—ಅವರು ರೆಕಮೆಂಡ್ ಮಾಡಿದ್ದಾರೆ.

ಶ್ರೀ ಜೆ. ಎಲ್. ಕಬಾಡೆ.—ಯಾವ ತರಹ ರೆಕಮೆಂಡ್ ಮಾಡಿದ್ದಾರೆ ?

ಶ್ರೀ ಡಿ. ದೇವರಾಜ ಅರಸ್.—ಪ್ರಸಸ್ತಿ ಕೊಡಿ ಎಂದು.

ಶ್ರೀ ಜೆ. ಎಲ್. ಕಬಾಡೆ.—ಆದರ ಬಗ್ಗೆ ಪರಿಹಾರ ಬಹುಮಾನವನ್ನು ಏನಾದರೂ ಸಬ್ ಇನ್ ಸ್ಪೆಕ್ಟರ್‌ಗಾಗಲೀ ಅಥವಾ ಪೋಲೀಸ್‌ನವರಿಗಾಗಲೀ ಕೊಟ್ಟಿದೀರಾ ?

ಶ್ರೀ ಡಿ. ದೇವರಾಜ ಅರಸ್.—ಆ ಇನ್ವಿಡೆಂಟಿಗೆ ಸಂಬಂಧಪಟ್ಟಹಾಗೆ ಏನು ಕೊಟ್ಟಿಲ್ಲ.

ಶ್ರೀ ಜೆ. ಎಲ್. ಕಬಾಡೆ.—ಕೊಡದೆ ಇರುವುದಕ್ಕೆ ಕಾರಣವೇನು ? ಸರ್ಕಾರಿ ಆಸ್ತಿಗೆ ಬೆಂಕಿ ಇಡುವುದಕ್ಕೆ ಪ್ರಯತ್ನ ಮಾಡಿದಾಗ ಅದನ್ನೆಲ್ಲ ತಪ್ಪಿಸಿ ಈಗ ಆಸ್ಪತ್ರೆಯಲ್ಲಿ ಬಿದ್ದಿರುವಂತಹ ಅಧಿಕಾರಿಗಳಿಗೆ ಪರಿಹಾರಧನ ನೀಡುವುದಕ್ಕೆ ಸರ್ಕಾರಕ್ಕೆ ಬಂದಿರುವ ತೊಂದರೆಯಾದರೂ ಏನು ?

ಶ್ರೀ ಡಿ. ದೇವರಾಜ ಅರಸ್.—ರೂಲ್ಸ್ ಪ್ರಕಾರ ಏನು ಇದೆಯೋ ಅದನ್ನು ಕೊಡುತ್ತೇವೆ. ಸ್ಪೆಷಲ್ ಆಗಿ ಏನು ಕೊಡುವುದಿಲ್ಲ.

ಅಧ್ಯಕ್ಷರು.—ಪ್ರಶ್ನೆ ನಂ. ೩೧೨ ಮತ್ತು ೫೪೩ ಸೋಮವಾರ ತೆಗೆದುಕೊಳ್ಳಲಾಗುವುದು.

Expenditure incurred on drought Relief in 1972-73

78. SRI T. R. SHAMANNA (Fort) —Will the Minister for Revenue be pleased to state:—

(*a*) the total expenditure incurred during the drought period of 1972-73 and the items of expenditure under each head;

(*b*) the assistance received from the Central Government as (1) Grants and (2) Loans;

(*c*) the nature of expenditure incurred;

(*d*) how the (1) Equipment, (2) Machinery and (3) Vehicles bought for drought relief works were disposed or utilised ?

SRI H. M. CHANNABASAPPA (Minister for Health) [On behalf of SRI N. HUTCHAMASTHY GOWDA (Minister for Revenue)].—

(*a*) Total expenditure incurred was Rs. 2500.18 lakhs. Items of expenditure are given in appendix.

(*b*) The amounts received from the Government of India during 1972-73 and 1973-74 were:

(1) Grant	Rs.	1320.00	lakhs
(2) Loan	Rs.	1936.00	lakhs

(*c*) *Vide* appendix.

Details showing the expenditure incurred during 1972-73 on Scarcity Relief Operations in Karnataka

		Amount (Rs. in lakhs)
I. Relief Works :		
Irrigation	...	518.45
Communication	...	1,422.17
Soil Conservation	...	194.52
Other Works	...	247.98
Total I	...	2,383.12
II. Gratuitous Relief		
Relief operations eligible for assistance	...	13.23
Flood, Fire and accidents	...	46.99
Total II	...	60.22
III. Miscellaneous :		
Grant for local bodies for relief works	...	0.51
Emergency Feeding Programme	...	8.78
Cattle shift	...	4.75
Yarn depots and relief centres	...	41.76
Other items	...	1.22
Total III	...	56.84
Grand Total	...	2,500.18

(*d*) A substantial part of the equipment, and all the machinery are retained in the PWD. The rest of the equipment and the vehicles, have been utilised in several Government Departments, except that some vehicles have been sold to Karnataka State Road Transport Corporation T. M. C.'s and other bodies.

ಶ್ರೀ ಟಿ. ಆರ್. ಶಾಮಣ್ಣ.—ತಾವು ಇಲ್ಲಿ ಕೊಟ್ಟಿರುವ ಪಟ್ಟಿ ಪ್ರಕಾರ ೧೯೭೨-೭೩ನೇ ಸಾಲಿನಲ್ಲಿ ತಗಲಿರುವ ಒಟ್ಟು ವೆಚ್ಚ ೨೫೦೦ ಲಕ್ಷ ರೂಪಾಯಿಗಳೆಂದೂ ಮತ್ತು ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಅನುದಾನ ಮತ್ತು ಸಾಲ ೩೨೫೬ ಲಕ್ಷ ರೂಪಾಯಿಗಳೆಂದು ಗೊತ್ತಾಗುತ್ತದೆ. ಹಾಗಾದರೆ, ನಾವು ಖರ್ಚು ಮಾಡಿರುವುದಕ್ಕಿಂತ ೭ ಲಕ್ಷ ರೂಪಾಯಿ ಜಾಸ್ತಿ ಗ್ರಾಂಟ್ ಕೊಟ್ಟಿದ್ದಾರೆಯೇ ? ಅದನ್ನು ಸ್ವಲ್ಪ ಸರಿಯಾಗಿ ನೋಡಿ ಹೇಳಿ.

† ಶ್ರೀ ಎಚ್. ಎಂ. ಚನ್ನಬಸಪ್ಪ.— ಗ್ರಾಂಟ್ ಮತ್ತು ಲೋನ್ ಕೊಟ್ಟಿರುವುದು ೧೯೭೨-೭೩ ಮತ್ತು ೧೯೭೩-೭೪ಕ್ಕೆ (ಎರಡು ವರ್ಷಕ್ಕೆ), ಆದರೆ ನೀವು ರೆಫರ್ ಮಾಡುತ್ತಿರುವುದು ಒಂದೇ ವರ್ಷದ್ದು.

ಶ್ರೀ ಟಿ. ಆರ್. ಶಾಮಣ್ಣ.— ಕ್ಷಾಮ ಪರಿಹಾರ ಕಾಲದಲ್ಲಿ ಕೊಂಡುಕೊಂಡಂತಹ ಮೆಷಿನರಿ ಮತ್ತು ಎಕ್ವಿಪ್‌ಮೆಂಟ್‌ಗಳನ್ನು ಬೇರೆ ಬೇರೆ ಇಲಾಖೆಗಳಲ್ಲಿ ಬಳಸಿಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಹಾಗಾದರೆ ಅದಕ್ಕೆ ಖರ್ಚು ಮಾಡಿದ ಹಣ ಎಷ್ಟು ಮತ್ತು ಅದರಿಂದಾದ ನಷ್ಟ ಎಷ್ಟು ಎಂದು ತಿಳಿಸುತ್ತೀರಾ ? You have purchased equipment and machinery for drought relief. I would like to know the total amount exper ded for the purchase of equipment and machinery and what is the value fixed after taking over by other department ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಒಟ್ಟಿನ ಮೆಷಿನರಿ ಮತ್ತು ಎಕ್ವಿಪ್‌ಮೆಂಟ್‌ಗಳನ್ನು ಕೊಳ್ಳುವುದಕ್ಕೆ ೭,೯೯,೮೮,೦೦೦ (೭೯೯.೮೮ ಲಕ್ಷ) ರೂಪಾಯಿಗಳಂ ವೆಚ್ಚವಾಗಿದೆ. ಅದರಲ್ಲಿ ೩/೪ ಭಾಗ ಹಣವನ್ನು ಎಲ್ಲ ಇಲಾಖೆಯವರಂ ಅಸೆಸ್‌ಮೆಂಟ್ ಮಾಡಿದ್ದಾರೆ. ಆ ಪೀರಿಯಡ್‌ನಲ್ಲಿ ಎಷ್ಟು ದಿನಗಳ ಕಾಲ ಕೆಲಸ ಮಾಡಿದೆ ಅದಕ್ಕೆ ಡಿಪ್ರಿಸಿಯೇಷನ್ ಕಳೆದಂ ವರ್ಗಾವಣೆ ಮಾಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—೧೯೭೩-೭೪ಕ್ಕೆ ಏನಾದರೂ ಖರ್ಚಾಗಿದೆಯೇ ? ಹಾಗೆ ಖರ್ಚಾಗಿದ್ದರೆ ಎಷ್ಟು ಖರ್ಚಾಗಿದೆ ಎಂದಂ ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಸಬ್ಜೆಕ್ಟ್ ಟು ಕರೆಕ್ಷನ್ ಒಟ್ಟು ೬೪ ಕೋಟಿ ರೂಪಾಯಿ ಖರ್ಚಾಗಿದೆ ಅದರಲ್ಲಿ ಮೊದಲನೆ ವರ್ಷ ೨೫ ಕೋಟಿ ರೂಪಾಯಿ ಮತ್ತು ಬಾಕಿ ೩೯ ಕೋಟಿ ರೂಪಾಯಿ ಮುಂದಿನ ವರ್ಷ ಖರ್ಚಾಗಿದೆ.

ಶ್ರೀ ಟಿ.ಆರ್. ಶಾಮಣ್ಣ.—ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಕೊಟ್ಟಿರುವ ಪರಿಶಿಷ್ಟದಲ್ಲಿ ಫ್ಲಡ್, ಫೈರ್ ಅಂಡ್ ಆಕ್ಸಿಡೆಂಟ್ಸ್‌ಗೆ ೪೬.೯೯ ಲಕ್ಷ ಖರ್ಚಾಗಿದೆ ಎಂದು ಹೇಳಿದ್ದೀರಿ. ಇದಕ್ಕೆ ಬ್ರೇಕ್ ಅಪ್ ಕೊಡುವುದಕ್ಕಾಗುತ್ತದೆಯೆ ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಅದಕ್ಕೆಲ್ಲ ಬ್ರೇಕ್ ಅಪ್ ಕೊಡುವುದು ಕಷ್ಟ.

Posts of District, Additional District and Sessions Judges in the State

73. SHRI P.M. BANGI (JAMKHANDI).—Will the chief Minister be pleased to state :—

(*a*) the number of posts of District and Additional District and Sessions Judges created in the State ;

(*b*) whether any of these posts are vacant ; if so, since when ;

(*c*) whether any posts of Distaict Judges in the Revenue Appellate and other Tribunals are vacant ; if so, the number of such vacant posts and since when they are vacant ;

(*d*) the reasons for keeping the post of District Judges, Additional District Judges and of Judicial Members or Revenue Appellate and other Tribunals vacant ;

(*e*) the steps taken to fill up these posts ?